# ಹಳ್ಳಿಯ ಮಸಣದಲ್ಲಿ ರಚಿಸಿದ ಒಂದು ಶೋಕಗೀತೆ

ಮಂದಿರದ ಘಂಟೆಯು ಶೋಕದಿ ದಿನವೊಂದರ ಆಟಕ್ಕೆ ತೆರೆ ಎಳೆಯಲು ಬಾರಿಸುತ್ತಿದೆ.
ಜಾನುವಾರುಗಳ ಹಿಂಡು ಹಾಗೆಯೇ ಕೂಗುತ್ತ ಹುಲ್ಲುಗಾವಲ ತೊರೆಯುತ್ತಿದೆ,
ದಣಿದ ಹೆಜ್ಜೆಗಳನಿಡುತ್ತಾ ನೇಗಿಲಯೋಗಿ ಮನೆಯೆಡೆಗೆ ಸಾಗುತ್ತಾ,
ಜಗತ್ತನ್ನು ಕತ್ತಲೆಗೆ ಮತ್ತು ನನಗೆ ಬಿಟ್ಟುಹೋಗುತ್ತಿರುವಂತಿದೆ.

ಈಗ ಹೊಳೆಯುತ್ತಿದ್ದ ಭೂದೃಶ್ಯವು ಮಸುಕಾಗುತ್ತಿರುವುದು ಗೋಚರಿಸುತ್ತಿದೆ,
ಜೀಯೆಂದು, ವೃತ್ತಗಳಲ್ಲಿ ಹಾರಾಡುತ್ತಿರುವ ಜೀರಿಂಬೆಗಳ ಹೊರತು,
ಬೀಸುತ್ತಿದ್ದ ಎಲ್ಲಾ ಮಾರುತಗಳು ಗಂಭೀರತೆ ನೆಲೆಸುವಂತೆ ಸ್ತಬ್ಧವಾಗಿವೆ,
ದೂರದಲ್ಲೆಲ್ಲೋ ಕೊಟ್ಟಿಗೆಗಳಲ್ಲಿ, ಹಿಂಡಿನ ಗೆಜ್ಜೆಗಳು ಮಂದವಾಗಿ, ಜೋಗುಳವಾಡುತ್ತಿವೆ;

ದೂರದ, ಹಸಿರಿನ ಲತಾಗೋಪುರದಿಂದ, ಬರುತ್ತಿದ್ದ ಗೊಣಗಾಟವ ಬಿಟ್ಟರೆ,
ಅಲ್ಲಿನ ಆ ಗೂಬೆಯು, ದು:ಖದಿ ಚಂದ್ರನಿಗೆ ದೂರುತ್ತಿತ್ತು
ಅದೇನೆಂದರೆ, ಅವಳ ರಹಸ್ಯ ವಾಸದ ಬಳಿ ಅಲೆದಾಡುತ್ತಿರುವ,
ತನ್ನ ಪ್ರಾಚೀನತೆಯ ಏಕಾಂತದ ಆಳ್ವಿಕೆಯನ್ನು ಕೆಡಿಸಿಯಾನೆಂದು.

ಅಲ್ಲಿನ ಅಂಕುಡೊಂಕಿನ ಒರಟು ಎಲ್ಮ್ ಮರಗಳ ಕೆಳಗೆ, ಆ ಯೀವ್ ಮರದ ನೆರಳಲ್ಲಿ
ಕೊಳೆತು ರಾಶಿಯಂತಿದ್ದ ಹುಲ್ಲು, ಹಾಸಿದಂತೆ ಅಲ್ಲಿರಲು,
ಪ್ರತಿಯೊಬ್ಬನು ತನ್ನದೆನಿಸಿಕೊಂಡ ಆ ಕಿರಿದಾದ ಜಾಗದಲ್ಲಿ ಎಂದೆಂದಿಗೂ ವಿರಮಿಸಿದಂತಿದ್ದು,
ಕುಗ್ರಾಮದ ಒರಟು ಪೂರ್ವಜರು ಅಲ್ಲಿ ನಿದ್ರಿಸಿರುವರು.

ಮುಂಜಾನೆಯ ಹಿತವಾದ ತಂಗಾಳಿಯಾಗಲೀ,
ಒಣಹುಲ್ಲಿನಿಂದ ಕಟ್ಟಲ್ಪಟ್ಟ ಗೂಡಿನಲ್ಲಿರುವ ಪಕ್ಷಿಯ ಕಲರವವಾಗಲೀ,
ಕೋಳಿಯ ಕೂಗಾಗಲಿ ಅಥವಾ ಮಾರ್ದನಿಸುವ ಕಹಳೆಯಾಗಲೀ,
ಇನ್ನು ಮುಂದೆ ಅವರನ್ನು ಅವರ ದೀನ ಹಾಸಿಗೆಯಿಂದ ಎಬ್ಬಿಸಲಾರವು.

ಇನ್ನು ಮುಂದೆ ಅವರಿಗಾಗಿ, ಉರಿಯುವ ಒಲೆ ಹಚ್ಚುವವರಿಲ್ಲ,
ಅಥವಾ ಸಂಜೆಯಲ್ಲಿ ಗೃಹಿಣಿಯ ಆರೈಕೆ ಮತ್ತೆ ಸಿಗುವುದಿಲ್ಲ:
ತಂದೆ ಬಂದನೆಂದು ತೊದಲುತ್ತಾ ಯಾವುದೇ ಮಕ್ಕಳು ಓಡಿ ಬರುವುದಿಲ್ಲ ಅಥವಾ ತಾ ಮೊದಲೆಂದು
ಮುತ್ತೊಂದನ್ನು ಹಂಚಿಕೊಳ್ಳಲ್ಲೊಲ್ಲದೆ ಅಸೂಯೆಯಿಂದ  ಅವನ ತೊಡೆಯ ಮೇಲೇರಿ ಕೂರುವವರಿಲ್ಲ.

ಆಗಾಗ್ಗೆ ತಮ್ಮ ಕುಡುಗೋಲಿನಿಂದ ಫಸಲು ಕೊಯ್ಲು ಮಾಡುತ್ತಾ ಸುಗ್ಗಿ ಮಾಡುತ್ತಿದ್ದರವರು,
ನೇಗಿಲು ಹಿಡಿದು ಭೂಮಿಯ ಮೊಂಡುತನವ ಮುರಿದು ಬೀಜ ಬಿತ್ತುತ್ತಿದ್ದರು;
ಎಷ್ಟು ಸೊಗಸಾಗಿ ತಮ್ಮ ಎತ್ತುಗಳನ್ನು ನಡೆಸುತ್ತಾ ಹೊಲಗಳೆಡೆಗೆ ಬರುತ್ತಿದ್ದರು!
ಇವರ ಗಟ್ಟಿಮುಟ್ಟಾದ ಪೆಟ್ಟುಗಳಿಗೆ ಕಾಡು ಹೇಗೆ ಬದಲಾಯಿತು!

ಆಕಾಂಕ್ಷೆಯು ಅವರ ಉಪಯುಕ್ತ ಶ್ರಮವನ್ನು, ಹಾಗೇಯೆ ಅವರ ಸರಳ ಸಂತೋಷವನ್ನು

ಮತ್ತು ಅಸ್ಪಷ್ಟ ವಿಧಿಲಿಖಿತವನ್ನು ಅಣಕಮಾಡಬಾರದು;
ಅಥವಾ ಭವ್ಯತೆಯು ಅವರ ದೈನಂದಿನ ಸಣ್ಣ ಪುಟ್ಟ ಚಟುವಟಿಕೆಗಳ
ಲೆಕ್ಕ ತಿಳಿದು ತಿರಸ್ಕಾರದಿಂದ ನಗಬಾರದು.

ಮನೆತನದ ಹೆಗ್ಗಳಿಕೆ, ಅಧಿಕಾರದ ಆಡಂಬರ,
ಮತ್ತು ಆ ಸೌಂದರ್ಯ, ಸಕಲ ಸಂಪತ್ತು,
ಎಲ್ಲವೂ ಒಂದೇ ತೆರನಾಗಿ ಅನಿವಾರ್ಯದ ಆ ಘಳಿಗೆಗಾಗಿ ಕಾದಿವೆ.
ವೈಭವದ ಹಾದಿಗಳು ಸಾಗುತ್ತಿವೆ, ಆದರೆ ಸಮಾಧಿಯೆಡೆಗೆ.

ಅಥವಾ ಓ ಪ್ರತಿಷ್ಠಿತರೇ, ನೀವು ಇವರ ಸಮಾಧಿಗಳ ಮೇಲೆ
ಸಂಕೇತಗಳಿಲ್ಲವೆಂದು, ನೆನಪುಗಳ ತಪ್ಪಿಗಾಗಿ ಇವರನ್ನು ದೂಷಿಸದಿರಿ.
ಉದ್ದನೆಯ ಹಜಾರಗಳಲ್ಲಿ ಗೋಪುರದುದ್ದಕ್ಕೂ ಕೇಳಿಸುವ ಘಂಟಾನಾದ
ಮತ್ತು ಗುಣಗಾನ, ಪ್ರಾರ್ಥನೆಗಳು, ಸ್ಮಾರಕಗಳಿಲ್ಲವಾದ್ದರಿಂದ ಕೇಳುವುದಿಲ್ಲ.

ಚಿತಾಭಸ್ಮ ತುಂಬಿದ ಕೆತ್ತನೆಗಳ ಕುಡಿಕೆಯು ಅಥವಾ ಜೀವಂತ ಕಾಣುವ ಪ್ರತಿಮೆಗಳು
ಮರೆಯಾದ ಆತ್ಮವನ್ನು ಇವರ ಸೌಧದೊಳಗೆ ಮತ್ತೆ ಕರೆತರಬಹುದೇ?
ಘನತೆಯ ಮಾತುಗಳು ಮಣ್ಣಿನಲ್ಲಿ ಸ್ತಬ್ಧವಾಗಿರುವ ಇವರ ಕೆರಳಿಸಬಲ್ಲವೇ?
ಅಥವಾ ಮುಖಸ್ತುತಿಯು ಸತ್ತ ಜನರ ಮಂಕಾದ ತಣ್ಣಗಿನ ಕಿವಿಗಳನ್ನು ಸಂತೈಸಬಹುದೇ?

ಬಹುಶ:, ಈ ನಿರ್ಲಕ್ಷಿತ ಜಾಗದಲ್ಲಿ ವಿರಮಿಸಿರುವ
ಯಾವುದೋ ಹೃದಯವು ಹಿಂದೊಮ್ಮೆ ದೈವ ಜ್ವಾಲೆಯ (ಉತ್ಸಾಹ) ಗರ್ಭ ಧರಿಸಿದ್ದಿರಬೇಕು
ರಾಜದಂಡವ ಹಿಡಿದು ತೂಗಾಡಿಸುವ ಸಾಮರ್ಥ್ಯ ಹೊಂದಿದವನಿರಬೇಕು
ಅಥವಾ ತಂತಿವಾದ್ಯಕ್ಕೆ ಜೀವ ತುಂಬಿ ಭಾವೋತ್ಕರ್ಷ ಉಂಟುಮಾಡಬಲ್ಲ ಗಾರುಡಿಗನಂತವನಿರಬೇಕು.

ಆದರೆ ಅವರ ಕಣ್ಣಿಗೆ ತನ್ನ ವಿಸ್ತಾರವಾದ ಪುಟಗಳನ್ನು
ಸಮಯದ ಕೊಳ್ಳೆಹೊಡೆದು ಶ್ರೀಮಂತವಾದ, ಜ್ಞಾನವು, ಎಂದೂ ತೆರೆದುಕೊಳ್ಳಲಿಲ್ಲ;
ಕೊರೆಯುವ ಬಡತನ ಅವರ ಅತೀವ ಉತ್ಸಾಹವನ್ನು ತಣ್ಣಗಾಗಿಸಿತು,
ಮಾತ್ರವಲ್ಲದೆ ಕಲ್ಪನಾಧಾರೆಯು ಹರಿಯದಂತೆ ಹೆಪ್ಪುಗಟ್ಟಿಸಿತು.

ಪ್ರಶಾಂತ ಸಾಗರದ ಆಳದಡಿಯ ಕತ್ತಲ ಗವಿಗಳಲ್ಲಿ
ಅಡಗಿರುವ ಅತೀಶುದ್ಧ ಮುತ್ತು ರತ್ನಗಳಿವರು;
ನಿರ್ಜನ ಕಾಡುಗಳಲ್ಲಿ ಹುಟ್ಟಿ, ಕಾಣದಂತೆ ಅರಳಿ, ತನ್ನ ಪರಿಮಳವ ಬೆರಸಿ,
ಮರುಭೂಮಿಯ ಗಾಳಿಗಳಲ್ಲಿ ವ್ಯರ್ಥವಾಗುವ ಹೂಗಳು, ಈ ಜನರು.

ರಾಜನ ಕ್ರೌರ್ಯವ ಎದುರಿಸಿದ ನಿರ್ಭೀತ, ಗಂಡೆದೆಯ,
ದೇಶಿಯ ಹ್ಯಾಂಪ್‌ಡೆನ್‌ನಂತಹವನು ಇಲ್ಲಿ ಯಾರೋ ಇದ್ದಿರಬಹುದು;
ಮಿಲ್ಟನ್‌ನಂತಹ ಕವಿಯು, ಖ್ಯಾತಿಗಳಿಸಲಾರದೆ ಮೂಕನಾಗಿಯೇ ಇಲ್ಲಿ ಮಣ್ಣು ಸೇರಿರಬಹುದು,
ದೇಶದಲ್ಲಿ ರಕ್ತದೋಕುಳಿಯಾಡಿದ ಕ್ರಾಂತಿವೀರ ಕ್ರಾಮ್‌ವೆಲ್‌ನಂತಹವನು ಇಲ್ಲಿ ಶಾಂತವಾಗಿರಬಹುದು.

ಅವರ ಜೀವನದ ಸಾಕಷ್ಟು ನೋವು ಮತ್ತು ಸಂಕಟಗಳು
ಆಳುವ ಮಂಡಲದಿಂದ ಸ್ವೀಕರಿಸಬಹುದಾದ ಚಪ್ಪಾಳೆಗಳ ತಡೆದು ಬಿಟ್ಟವು;
ದೇಶಸೇವೆಯಲ್ಲಿ ಸಲ್ಲಿಸಬಹುದಾದ ಅನೇಕ ಸತ್ಕಾರ್ಯಗಳ ನಿಗ್ರಹಿಸಿ,
ರಾಷ್ಟ್ರದ ದೃಷ್ಟಿಯಲ್ಲಿ ಓದುವ ಇತಿಹಾಸ ಸೇರದಾದರು.

ಅವರ ಸಾಕಷ್ಟು ಸನ್ನಿವೇಶಗಳು ಅವರ ಸುತ್ತುವರಿದು
ಸದ್ಗುಣಗಳ ತಡೆಹಿಡಿದಿದ್ದು ಮಾತ್ರವಲ್ಲದೆ, ಅಪರಾಧಗಳಾಗವುದನ್ನೂ ನಿಲ್ಲಿಸಿಬಿಟ್ಟವು.
ಸಿಂಹಾಸನಕ್ಕಾಗಿ ಆಕ್ರಮಿಸಿ, ನರಮೇಧಕ್ಕೆ ಪ್ರೇರೇಪಿಸದೆ,
ಮನುಕುಲದ ಮೇಲೆ ಕರುಣೆಯ ದ್ವಾರಗಳನ್ನು ಮುಚ್ಚದಂತೆ ತಡೆದುಬಿಟ್ಟವು.

ಪ್ರಜ್ಞಾಪೂರ್ವಕವಾಗಿ ಸತ್ಯಮರೆಮಾಚಲು ಹೆಣಗಾಡುವಂತಿಲ್ಲ ಅವರು
ಅವಮಾನಗಳ ಮುಗ್ದತೆಯ ನಾಚಿಕೆಯನ್ನು ತಣಿಸುವ
ಅಥವಾ ಸುಖವಿಲಾಸ ಮತ್ತು ಪ್ರತಿಷ್ಠೆಯ ದೇವತೆಯ ಓಲೈಸುವ,
ಧೂಪದ್ರವ್ಯದೊಂದಿಗೆ ಜ್ಯೋತಿಯ ಉರಿಸುವುದು ಬೇಕಿಲ್ಲ.

ಹುಚ್ಚಾಟದ ಜಂಗುಳಿಯ, ಅಜ್ಞಾನದ ಸಂಘರ್ಷದಿಂದ ದೂರವಿದ್ದ ಅವರು,
ತಮ್ಮ ಗಂಭೀರ ಆಶಯಗಳು ಎಂದಿಗೂ ದಾರಿ ತಪ್ಪುವುದನ್ನು ಕಲಿಯಲಿಲ್ಲ;
ಪ್ರತ್ಯೇಕವಾದ ತಮ್ಮ ಜೀವನದ ತಂಪಾದ ಕಣಿವೆಯುದುದ್ದಕ್ಕೂ,
ಅವರು ತಮ್ಮ ದಾರಿಯಲ್ಲಿ ಸದ್ದಿಲ್ಲದ ಜೀವನದ ಒಲವನ್ನು ಉಳಿಸಿಕೊಂಡರು.

ಆದರೂ ಅಪಮಾನಗಳಿಂದ ರಕ್ಷಿಸಿಕೊಳ್ಳಲು, ಇಲ್ಲಿನ ಎಲುಬುಗಳು,
ತಮ್ಮ ಬಳಿ ದುರ್ಬಲ ಸ್ಮಾರಕಗಳನ್ನು ಹೊಂದಿವೆ.
ಸಂಸ್ಕರಣವಿಲ್ಲದ ಪ್ರಾಸಗಳು ಹಾಗೂ ಆಕಾರವಿಲ್ಲದ ಶಿಲ್ಪದೊಂದಿಗೆ ಅಲಂಕರಿಸ್ಪಟ್ಟು,
ದೈನ್ಯದಿಂದ ಹಾದುಹೋಗುವವರ ನಿಟ್ಟುಸಿರ ಗೌರವ ಪಡೆಯುತ್ತವೆ.

ಅವರ ಹೆಸರು, ಅವರ ವರ್ಷಗಳು ಅಕ್ಷರಬಾರದ ದೇವತೆಯಿಂದ ಬರೆಯಲ್ಪಟ್ಟು,
ವಾರ್ತೆ ಮತ್ತು ಕವನಗಳ ಜಾಗವನ್ನು ಪೂರೈಸಿವೆ;
ಹಾಗೂ ಅವಳ ಸುತ್ತಲೂ ಅನೇಕ ಪವಿತ್ರ ಪಠ್ಯಗಳ ಹರಡಿರುವಳು,
ಅದು ಹಳ್ಳಿಗಾಡಿನ ನೈತಿಕವಾದಿಗೆ ಸಾವಿನ ಕಲ್ಪನೆಯ ಕಲಿಸುತ್ತವೆ.

ಯಾರು, ಮೂಕಮರೆವಿಗೆ ಬೇಟೆ ಎನಿಸಿಕೊಳ್ಳಲು,
ಈ ಆಹ್ಲಾದಕರ ಮತ್ತು ಸ್ವಾರಸ್ಯಕರ ಅಸ್ತಿತ್ವವನ್ನು ತ್ಯಜಿಸಲು,
ಅಥವಾ ಭುವಿಯ ಬೆಚ್ಚಗಿನ ಪರಿಸರವನ್ನು ತೊರೆಯಲು,
ಬಿಟ್ಟು ಬಂದದ್ದೇನೆಂದು ತಿರುಗಿ ನೋಡಲಾಗದ್ದನು (ಸಾವನ್ನು) ಬಯಸುವರು ?

ನಿರ್ಗಮಿಸುವ ಆತ್ಮಗಳು ಅವರ ಪ್ರೀತಿಪಾತ್ರರನ್ನು ಅವಲಂಬಿಸಿರುತ್ತಾರೆ,
ಸಾಯುವಾಗ ಕಣ್ಣುಗಳನ್ನು ಮುಚ್ಚಲು ಅವರಿಗೆ ಕೆಲವು ಧರ್ಮನಿಷ್ಠರು ಬೇಕು;
ನಿಸರ್ಗದ ಆ ಧ್ವನಿಯು ಸಮಾದಿಯಿಂದಲೂ ಕೂಗುತ್ತವೆ,

ನಮ್ಮ ಅವಶೇಷಗಳಲ್ಲಿಯೂ ಸಹ ಅವರ ಭಾವೋದ್ರೇಕಗಳು ವಾಸಿಸುತ್ತವೆ.

ಸ್ಮಾರಕಗಳ ಮನ್ನಣೆ ಪಡೆಯದೆ ಹೋದರು ಸತ್ತವರು ಎಂಬ ಅರಿವು ನಿನ್ನಲ್ಲಿ ಮೂಡಿ
ಅವರ ಬದುಕಿನ ನಿರಾಸಕ್ತ ಕಥೆಯ ನಿರೂಪ ಈ ಸಾಲುಗಳು ತುಂಬಿವೆ.
ಆಕಸ್ಮಿತವಾಗಿ, ಏಕಾಂತದ ಚಿಂತನೆಯಿಂದ ಕೂಡಿ,
ಯಾರೋ ಪ್ರೀತಿಪಾತ್ರನಾದವನೊಬ್ಬ, ನಿನ್ನ ಹಣೆಬರಹವ ವಿಚಾರಿಸುವನು,

ಬಹುಶಃ ಯಾರೋ ಬಿಳಿತಲೆಯ ಹಳ್ಳಿಗನು ಹೇಳಬಹುದು,
"ನಾವು ಅವನನ್ನು ಆಗಾಗ್ಗೆ ಮುಂಜಾನೆಯ ಉತ್ತುಂಗದಲ್ಲಿ ನೋಡಿದ್ದೇವೆ
ಆತುರದ ಹೆಜ್ಜೆಗಳನ್ನಿಡುತ್ತಾ, ಇಬ್ಬನಿಯ ಹನಿಗಳನ್ನು ಒರೆಸುತ್ತಾ,
ಎತ್ತರದ ಹುಲ್ಲುಹಾಸಿನ ಮೇಲೆ ಸೂರ್ಯನ ಕಾಣುತ್ತಿದ್ದನು.

ಅಲ್ಲಿ ತನ್ನ ಹಳೆಯ ಸುಂದರ ಸುರುಳಿಯ ಬೇರುಗಳನ್ನು ಎತ್ತರಕ್ಕೆ ಚಾಚಿದ,
ಹಾಗೇಯೆ, ತಲೆಯಾಡಿಸುವ ಹೊಂಗೆಮರದ ಬುಡದಲ್ಲಿ,
ತನ್ನ ಬಳಲಿದ ದೇಹವನ್ನು, ಮದ್ಯಾಹ್ನದ ಹೊತ್ತಿನಲ್ಲಿ, ಚಾಚುತ್ತದ್ದನು
ಮತ್ತು ಹರಿಯುತ್ತದ್ದ ಹಳ್ಳವನ್ನು ನೋಡುತ್ತಾ ಇರುತ್ತಿದ್ದನು.

ಅಲ್ಲಿಯ ಮರಗಳಿಂದ ಕಠಿಣವಾಗಿ, ಈಗ, ತಿರಸ್ಕಾರದಿಂದ ನಗುತ್ತಾ,
ದಿಕ್ಕುತಪ್ಪಿದ ತನ್ನ ಕನಸುಗಳ ಗೊಣಗುತ್ತಾ ಅಲೆದಾಡುತ್ತಿದ್ದನು.
ಈಗೊಮ್ಮೆ ಕಳೆಗುಂದಿದವನಂತೆ, ದು:ಖಿತನಾಗಿ, ಜರ್ಜರಿತನಂತೆ
ಅಥವಾ ಹುಚ್ಚಿನಲ್ಲಿ ಅಥವಾ ಹತಾಶ ಪ್ರೀತಿಯ ನೋವಿನಲ್ಲಿರುವಂತೆ ಕಾಣುತ್ತಿದ್ದನು.

ಒಂದು ಬೆಳಿಗ್ಗೆ ನಿತ್ಯವೇರುತ್ತಿದ್ದ ಬೆಟ್ಟದ ಮೇಲೆ ಅವನು ಕಾಣಸಿಗಲಿಲ್ಲ,
ಕುರುಚಲು ಭೂಮಿಯ ಉದ್ದಕ್ಕೂ, ಮತ್ತು ತನ್ನ ಮೆಚ್ಚಿನ ಮರದ ಬಳಿಯೂ ಕಾಣಲಿಲ್ಲ;
ಮತ್ತೊಂದು ದಿನ ಕಳೆಯಿತು ತೊರೆಯ ಹತ್ತಿರದಲ್ಲಾಗಲೀ,
ಅಥವಾ ಹುಲ್ಲುಹಾಸಿನ ಮೇಲಾಗಲಿ ಮತ್ತು ಆ ಕಾಡಿನಲ್ಲಾಗಲಿ ಇರಲಿಲ್ಲ ಅವನು;

ನಂತರದ ದಿನದಲ್ಲಿ ಚರಮಗೀತೆಗಳನ್ನು ಹಾಡುತ್ತಾ ಮೆಲ್ಲನೆ
ಚರ್ಚಿನ ಹಾದಿಯಲ್ಲಿ ಅವನ ಕರೆತರುವದನ್ನು ನಾವು ನೋಡಿದೆವು.
ಅಲ್ಲಿಯೇ ನೋಡಲು ಹಳೆಯದಂತೆ ಕಾಣುವ, ಗೋರಿಯ ಕೆಳಗೆ,
ಶಿಲೆಯ ಮೇಲಿನ ಕೆತ್ತನೆಯನ್ನು ಹತ್ತಿರದಿಂದ ಒಮ್ಮೆ ಓದು (ಕಾರಣ ನೀನು ಓದಲಾರೆ)."

ಗೋರಿವಾಕ್ಯ

ಇಲ್ಲಿ ಅವನ ಶಿರವನ್ನು ಭೂಮಡಿಲಲ್ಲಿ ಇಡಲಾಗಿದೆ.
ಕೀರ್ತಿ ಮತ್ತು ಸಿರಿವಂತಿಕೆ ತಿಳಿಯದೆ ಬೆಳದವನು.
ಅವನ ವಿನಮ್ರ ಬದುಕಿನಲ್ಲಿ ಸದ್ಜ್ಞಾನವು ತಿರಸ್ಕಾರ ತೋರಲಿಲ್ಲ.
ಆದರೆ ವಿಷಣ್ಣತೆಯು ತನ್ನದೇ ಗುರುತನ್ನು ಅವನಲ್ಲಿ ಕಂಡುಕೊಂಡಿತ್ತು.

ಅವನು ಹೃದಯ ವೈಶಾಲ್ಯನು ಮತ್ತು ಅವನ ಆತ್ಮವು ಪ್ರಾಮಾಣಿಕವಾಗಿದೆ,
ಸ್ವರ್ಗವು ಅವನಿಗೆ ಪ್ರತಿಯಾಗಿ ಬಹುಮಟ್ಟಿಗೆ ಹಿಂದಿರುಗಿಸಿತು:
ಅವನು ಕಣ್ಣೀರೊಂದನ್ನು, ತನ್ನಲ್ಲಿದ್ದ ಎಲ್ಲವನ್ನು ದುಃಖಕ್ಕೆ ನೀಡಿ,
ಸ್ವರ್ಗದಿಂದ ಸ್ನೇಹಿತನೊಬ್ಬನನ್ನು ( ಅವನ ಬಯಸಿದ್ದು ಅಷ್ಟೇ) ಪಡೆದನು.

ಅವನ ಯೋಗ್ಯತೆಯನ್ನು ಮತ್ತಷ್ಟು ಹುಡುಕಿ ಪ್ರಕಟಿಸಿದಿರಿ,
ಅಥವಾ ಅವನ ದುರ್ಬಲತೆಯನ್ನು ಮಹಾ ವಾಸ್ತವ್ಯದಿಂದ ಸೆಳೆಯದಿರಿ,
(ಅಲ್ಲಿ ಕಂಪಿಸುವ ವಿಶ್ವಾಸದಲ್ಲಿ ಸಮಾನವಾಗಿ, ಅವು ಪ್ರಶಾಂತವಾಗಿವೆ)
ಅವನ ತಂದೆ ಮತ್ತು ಅವನ ದೈವ ನೆಲಸಿರುವ ನಿವಾಸವದು.

---

**ಅನುವಾದ : ಮೋಹನ್ ಪ್ರಕಾಶ್**
**ಮೂಲ : ಥಾಮಸ್ ಗ್ರೇ**
**[ ೧೮ ನೇ ಶತಮಾನದ ಇಂಗ್ಲೀಷಿನ 'ಗ್ರೇವ್‌ಯಾರ್ಡ್' ಕವಿ]**

## ಅವನ ಅಂಧತ್ವವ ಕುರಿತು

ಅರ್ಧ ದಿನಗಳೂ ಮುಗಿಯದ ಹೊತ್ತಿನಲ್ಲಿ, ವಿಶಾಲ ಲೋಕದ ಕತ್ತಲ ಬಾಳಿನಲ್ಲಿ
ಬೆಳಕನ್ನು, ಹೇಗೆ ನಾ ದುಡಿಸಿದೆ ಎಂದಿನಿತು ಚಿಂತಿಸಿದಾಗ,
ನನ್ನ ಸೃಷ್ಟಿಸಿದಾತನ ಸೇವೆಯಲ್ಲಿ ನನ್ನ ನಿಜ ಲೆಕ್ಕವ ನೀಡಲು
ಎಷ್ಟೇ ಬಾಗಿದರೂ, ಮೃತ್ಯು ಮಾತ್ರವೇ ಮರೆಮಾಡಬಲ್ಲ
ಆ ಒಂದು ಪ್ರತಿಭೆ, ಬಳಸಲಾರದೆ ಉಳಿದು ಬಿಟ್ಟಿದೆಯಲ್ಲ ನನ್ನಲ್ಲಿ.
ಹಿಂತಿರುಗಿದಾಗ, ಅವನು, ನನ್ನ ನಿಂದಿಸಿಯಾನೇನೋ, ಇಲ್ಲದೇ ಇದ್ದಲ್ಲಿ.
"ಬೆಳಕಿನಿಂದ ವಂಚಿತನಾದವನಿಂದ, ದಿನದ ಸೇವೆ ಒತ್ತಾಯಿಸಬಹುದೇ ಭಗವಂತ?"
ಪ್ರೀತಿಯಿಂದ ನಾ ಕೇಳಬಯಸುವೆ. ಆದರೆ ತಾಳ್ಮೆಯು,
ನಿಲ್ಲಿಸುವಂತೆ ಆ ಗೊಣಗಾಟವ, ಕೂಡಲೇ ಉತ್ತರಿಸಿತು,
"ಮಾನವನ ಸೇವೆ ಅಥವಾ ಕೊಟ್ಟ ಉಡುಗೊರೆಗಳ ಅಗತ್ಯವಿಲ್ಲ ದೇವನಿಗೆ:
ಅವನ ಸೌಮ್ಯವಾದ ನೊಗದ ಭಾರವ ಸಹಿಸುವವನೇ ಶ್ರೇಷ್ಠ ಅವನಿಗೆ.
ಒಡೆಯನವನು. ಅವನಪ್ಪಣೆಯ ಪಾಲಿಸಲು, ಅವಿರತ ಅದೇ ಗತಿಯಲ್ಲಿ,
ಭೂಮಿ ಮತ್ತು ಸಾಗರಗಳಲ್ಲಿರುವರು ನಿಯೋಜಿತರು, ಸಾವಿರಾರು ಸಂಖ್ಯೆಯಲ್ಲಿ.
ನಿಂತು ಕಾಯುವ ಮಾತ್ರದವರೂ ಸಹ ಸೇವೆ ಸಲ್ಲಿಸುತ್ತಾರೆ."

**ಅನುವಾದ: ಮೋಹನ್ ಪ್ರಕಾಶ್**
**ಮೂಲ : ಜಾನ್ ಮಿಲ್ಟನ್**